# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 511
ಸದಸ್ಯರ ಹೆಸರು : ಶ್ರೀ ಎನ್ ಎಸ್ ಬೋಸರಾಜು (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 09.03.2020
ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯಲ್ಲಿರುವ RTPS ಮತ್ತು YTPS ಪರಿಸರವನ್ನು ಸಂರಕ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಯಚೂರು ಜಿಲ್ಲೆಯಲ್ಲಿರುವ YTPS ಪ್ರದೇಶದಲ್ಲಿ ಪರಿಸರ ಸಂರಕ್ಷಣೆಗಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ವಿವರಗಳು ಈ ಕೆಳಗಿನಂತಿವೆ |

| ವರ್ಷ | ನೆಡುತೋಪು | ಪ್ರದೇಶ | ನೆಟ್ಟ ಸಸಿಗಳು |
|---|---|---|---|
| 2017–18 | ಬ್ಲಾಕ್ ನೆಡುತೋಪು | 30.00 ಹೆಕ್ಟೇರ್ | 75,000 |
| 2018–19 | ಆಂತರಿಕ ರಸ್ತೆಬದಿ | 25.00 ಕಿ.ಮೀ | 10,000 |
| 2019–20 | ಬ್ಲಾಕ್ ನೆಡುತೋಪು | 7.00 ಹೆಕ್ಟೇರ್ | 2,800 |

ಸದರಿ ನೆಟ್ಟ ಸಸಿಗಳ ಉತ್ತಮ ಬೆಳವಣಿಗಾಗಿ ಹನಿ ನೀರಾವರಿ ಪದ್ಧತಿ ಅಳವಡಿಸಿ ನಿರ್ವಹಣೆ ಮಾಡಲಾಗುತ್ತಿದೆ. RTPS ಪ್ರದೇಶದಲ್ಲಿ ಅರಣ್ಯ ಇಲಾಖೆಯಿಂದ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ.

ಈ ವಿಷಯದ ಬಗ್ಗೆ ಇಂಧನ ಇಲಾಖೆಯು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ:–

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ: 07.12.2015ರಂದು ಹೊರಡಿಸಿದ ಗೆಜೆಟ್‌ನ ಕಂಡಿಕೆ ಎಸ್.ಓ.3305ರ ಪ್ರಕಾರ ಆರ್.ಟಿ.ಪಿ.ಎಸ್. ಮತ್ತು ವೈ.ಟಿ.ಪಿ.ಎಸ್.ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ಕೊಳವೆ ಅನಿಲದ ಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ "ತೋಯ್ದ ಸುಣ್ಣದಕಲ್ಲಿನ ಕೊಳವೆ ಅನಿಲ ನಿರ್ಗಂಧಕೀಕರಣ ವ್ಯವಸ್ಥೆಯನ್ನು" ಅಳವಡಿಸಲು ಕರ್ನಾಟಕ e-portal ಮುಖಾಂತರ ಕೆ.ಪಿ.ಸಿ.ಎಲ್ ದೇಶಿಯ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಟೆಂಡರ್ ಆಹ್ವಾನಿಸಿದೆ.

ಪ್ರಸ್ತುತ ಎರಡೂ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಟೆಂಡರ್‌ಗಳು ಮೌಲ್ಯಮಾಪನದ ಪ್ರಕ್ರಿಯೆ ಹಂತದಲ್ಲಿರುತ್ತವೆ.

---2

| | | |
|---|---|---|
| ಆ) | ರಾಯಚೂರು ನಗರಕ್ಕೆ ಸೇರಿರುವ ಅರಣ್ಯ ಭೂಮಿ ಎಷ್ಟು; ಇದನ್ನು ರಕ್ಷಣೆ ಮತ್ತು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಯಚೂರು ನಗರಕ್ಕೆ ಹೊಂದಿಕೊಂಡಂತೆ 437.98 ಹೆಕ್ಟೇರ್ ರಕ್ಷಿತ ಅರಣ್ಯ ಪ್ರದೇಶ ಇರುತ್ತದೆ. ಸದರಿ ರಕ್ಷಿತ ಅರಣ್ಯ ಪ್ರದೇಶ ಒತ್ತುವರಿಯಾಗದಂತೆ ರಕ್ಷಣೆ ಮಾಡಲಾಗುತ್ತಿದೆ. ಸದರಿ ಪ್ರದೇಶದಲ್ಲಿ 2006ರ ಪೂರ್ವದಲ್ಲಿ ನೆಡುತೋಪು ಕೈಗೊಂಡಿದ್ದು, ತದನಂತರ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ. |
| ಇ) | ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಒಟ್ಟು ವಿಸ್ತೀರ್ಣ ಎಷ್ಟು; ಅತಿಕ್ರಮಣ ಮಾಡಿರುವ ಅರಣ್ಯ ಪ್ರದೇಶ ಎಷ್ಟು? | ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಒಟ್ಟು 35,148.52 ಹೆಕ್ಟೇರ್ ಪ್ರದೇಶ ಇರುತ್ತದೆ. ಈ ಪೈಕಿ 159 ಕುಟುಂಬಗಳಿಂದ 422.457 ಹೆಕ್ಟೇರ್ ಅರಣ್ಯ ಭೂಮಿಯು ಒತ್ತುವರಿಯಾಗಿರುತ್ತದೆ. |

ಸಂಖ್ಯೆ: ಅಪಜೀ 24 ಎಫ್‌ಎಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು